**ಭಾರತ, ಜಪಾನ್, ಆಸ್ಟ್ರೇಲಿಯಾ ಮತ್ತು ಯುನೈಟೆಡ್ ಸ್ಟೇಟ್ಸ್ ನಡುವಿನ 3 ನೇ ಕ್ವಾಡ್ ಭಯೋತ್ಪಾದನೆ ನಿಗ್ರಹ ಕಾರ್ಯಕಾರಿ ಗುಂಪು (CTWG) ಸಭೆಯ ಜಂಟಿ ಹೇಳಿಕೆ**

ಡಿಸೆಂಬರ್ 06, 2025

ಮುಂದಿನ ಕ್ವಾಡ್ ಶೃಂಗಸಭೆಯನ್ನು ಆಯೋಜಿಸುವ ಭಾರತದ ಆವರ್ತನದ ಭಾಗವಾಗಿ, ಭಾರತ, ಜಪಾನ್, ಆಸ್ಟ್ರೇಲಿಯಾ ಮತ್ತು ಯುನೈಟೆಡ್ ಸ್ಟೇಟ್ಸ್ ನಡುವಿನ 3 ನೇ ಕ್ವಾಡ್ ಭಯೋತ್ಪಾದನೆ ನಿಗ್ರಹ ಕಾರ್ಯಕಾರಿ ಗುಂಪಿನ (CTWG) ಸಭೆಯನ್ನು 2025 ಡಿಸೆಂಬರ್ 04-05 ರಂದು ನವದೆಹಲಿಯಲ್ಲಿ ನಡೆಸಲಾಯಿತು. 2023 ಮಾರ್ಚ್‌ನಲ್ಲಿ ನವದೆಹಲಿಯಲ್ಲಿ ನಡೆದ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಕ್ವಾಡ್ CTWG ಅನ್ನು ಸ್ಥಾಪಿಸಲಾಯಿತು.

2. ಕಾರ್ಯದರ್ಶಿ (ಪಶ್ಚಿಮ), ರಾಯಭಾರಿ ಸಿಬಿ ಜಾರ್ಜ್ ಮುಖ್ಯ ಭಾಷಣ ಮಾಡಿ, ಭಯೋತ್ಪಾದನೆಯ ಪಿಡುಗನ್ನು ಎದುರಿಸಲು ಕ್ವಾಡ್‌ನೊಳಗೆ ಸಾಮಾನ್ಯ ಸಂಕಲ್ಪವನ್ನು ರೂಪಿಸುವ ಅಗತ್ಯವನ್ನು ಒತ್ತಿ ಹೇಳಿದರು ಮತ್ತು ಕ್ವಾಡ್ CTWG ಅನ್ನು ಹೆಚ್ಚು ಸ್ಥಿತಿಸ್ಥಾಪಕ, ದೃಢವಾದ ಮತ್ತು ಕ್ರಿಯಾಶೀಲ-ಆಧರಿತ ಕಾರ್ಯ ಸಮೂಹವನ್ನಾಗಿ ಮಾಡಲು ಎಲ್ಲಾ ಕ್ವಾಡ್ ಸದಸ್ಯರು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಿದರು. 2025 ಏಪ್ರಿಲ್ 22 ರ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತದೊಂದಿಗೆ ಒಗ್ಗಟ್ಟಿನ ಅಭಿವ್ಯಕ್ತಿ ವ್ಯಕ್ತಪಡಿಸಿದ್ದಕ್ಕಾಗಿ ಮತ್ತು ಬೆಂಬಲವನ್ನು ನೀಡಿದ್ದಕ್ಕಾಗಿ ಅವರು ಕ್ವಾಡ್ ಸದಸ್ಯ ದೇಶಗಳಿಗೆ ಧನ್ಯವಾದ ಸಲ್ಲಿಸಿದರು.

3. ಭಯೋತ್ಪಾದನೆ ನಿಗ್ರಹದ ಉಸ್ತುವಾರಿ ಹೊಂದಿರುವ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಯಿತು. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ ಡಾ. ವಿನೋದ್ ಬಹಾಡೆ; ಆಸ್ಟ್ರೇಲಿಯಾದ ವಿದೇಶಾಂಗ ವ್ಯವಹಾರಗಳು ಮತ್ತು ವ್ಯಾಪಾರ ಇಲಾಖೆಯ ಭಯೋತ್ಪಾದನೆ ನಿಗ್ರಹ ರಾಯಭಾರಿ ಮಿಸ್ ಜೆಮ್ಮಾ ಹಗ್ಗಿನ್ಸ್; ಜಪಾನ್ ವಿದೇಶಾಂಗ ಸಚಿವಾಲಯದ ಭಯೋತ್ಪಾದನೆ ಮತ್ತು ಅಂತಾರಾಷ್ಟ್ರೀಯ ಸಂಘಟಿತ ಅಪರಾಧ ನಿಗ್ರಹಕ್ಕಾಗಿ ಅಂತರಾಷ್ಟ್ರೀಯ ಸಹಕಾರದ ಉಸ್ತುವಾರಿ ರಾಯಭಾರಿ ಶ್ರೀ ಮಿನಾಮಿ ಹಿರೋಯುಕಿ; ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದ ರಾಜ್ಯ ಇಲಾಖೆಯ ಭಯೋತ್ಪಾದನೆ ನಿಗ್ರಹ ಬ್ಯೂರೋದ ಹಿರಿಯ ಬ್ಯೂರೋ ಅಧಿಕಾರಿ ಮಿಸ್ ಮೋನಿಕಾ ಅಗರ್ ಜಾಕೋಬ್ಸೆನ್ ಅವರು ತಮ್ಮ ನಿಯೋಗಗಳ ನೇತೃತ್ವ ವಹಿಸಿದ್ದರು.

4. ಗಡಿಯಾಚೆಗಿನ ಭಯೋತ್ಪಾದನೆ ಸೇರಿದಂತೆ ಅದರ ಎಲ್ಲಾ ರೂಪಗಳು ಮತ್ತು ಅಭಿವ್ಯಕ್ತಿಗಳಲ್ಲಿ ಭಯೋತ್ಪಾದನೆಯನ್ನು ಕ್ವಾಡ್ ಪಾಲುದಾರರು ಸ್ಪಷ್ಟವಾಗಿ ಖಂಡಿಸಿದರು. ದೆಹಲಿಯ ಕೆಂಪು ಕೋಟೆ ಹತ್ತಿರ 2025 ನವೆಂಬರ್ 10 ರಂದು ನಡೆದ ಘೋರ ಭಯೋತ್ಪಾದಕ ಘಟನೆಗೆ ಅವರು ಸಂತಾಪ ವ್ಯಕ್ತಪಡಿಸಿದರು. ಈ ಖಂಡನೀಯ ಕೃತ್ಯದ

ಅಪರಾಧಿಗಳು, ಸಂಘಟಕರು ಮತ್ತು ಹಣಕಾಸು ಒದಗಿಸುವವರನ್ನು ನ್ಯಾಯಕ್ಕೆ ಒಳಪಡಿಸಬೇಕೆಂದು ಮತ್ತು ಹಾಗೆ ಮಾಡಲು ಎಲ್ಲಾ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಸಹಕಾರ ನೀಡಬೇಕೆಂದು ಅವರು ಕರೆ ನೀಡಿದರು.

5. ಸಭೆಯ ಸಮಯದಲ್ಲಿ, ಕ್ವಾಡ್ ಸದಸ್ಯ ದೇಶಗಳು ಇಂಡೋ-ಪೆಸಿಫಿಕ್ ಪ್ರದೇಶದ ಬೆಳವಣಿಗೆಗಳನ್ನು ಒಳಗೊಂಡಂತೆ ಭಯೋತ್ಪಾದನಾ ಬೆದರಿಕೆಯ ರೂಪರೇಖೆ ಕುರಿತು ತಮ್ಮ ಮೌಲ್ಯಮಾಪನಗಳನ್ನು ಪರಸ್ಪರ ಹಂಚಿಕೊಂಡವು. ಅಸ್ತಿತ್ವದಲ್ಲಿರುವ ಮತ್ತು ಉದಯೋನ್ಮುಖ ಸವಾಲುಗಳನ್ನು ಪರಿಹರಿಸಲು ಬಳಸಬಹುದಾದ ಭಯೋತ್ಪಾದನೆ ನಿಗ್ರಹ ಸಹಕಾರ ಮತ್ತು ಕ್ರಮಗಳ ಸಂಪೂರ್ಣ ವ್ಯಾಪ್ತಿಯನ್ನು ಅವರು ಚರ್ಚಿಸಿದರು. ಇಂಡೋ-ಪೆಸಿಫಿಕ್ ಭಯೋತ್ಪಾದನೆಯ ಬೆದರಿಕೆಗಳಿಂದ ಮುಕ್ತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಪ್ರಾಮುಖ್ಯತೆಯನ್ನು ಅವರು ಒತ್ತಿಹೇಳಿದರು.

6. ಸಭೆಯ ಸಮಯದಲ್ಲಿ, "ನಗರ ಪರಿಸರದಲ್ಲಿ ಭಯೋತ್ಪಾದನೆ ನಿಗ್ರಹ ಕಾರ್ಯಾಚರಣೆಗಳು" ಕುರಿತು ತುರ್ತು ಸನ್ನದ್ಧತೆ ಅಭ್ಯಾಸಗಳ ಕುರಿತ ಚರ್ಚೆ(ಟೇಬಲ್ ಟಾಪ್ ಎಕ್ಸರ್ಸೈಸ್, TTx) ನಡೆಸಲಾಯಿತು. ಸಂಕೀರ್ಣ ಭಯೋತ್ಪಾದಕ ಸನ್ನಿವೇಶಗಳಿಗೆ ಪ್ರತಿಕ್ರಿಯಿಸಲು ಜಂಟಿ ಕಾರ್ಯಾಚರಣೆಯ ಸನ್ನದ್ಧತೆಗೆ ಸಂಭಾವ್ಯ ಅವಕಾಶಗಳನ್ನು ಗುರುತಿಸಲು ಮತ್ತು ತಮ್ಮ ಅತ್ಯುತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳಲು CT ತಜ್ಞರಿಗೆ TTx ಅವಕಾಶವನ್ನು ಒದಗಿಸಿತು.

7. ಬಹುಪಕ್ಷೀಯ ವೇದಿಕೆಯಲ್ಲಿ ಸಹಕಾರವನ್ನು ಬಲಪಡಿಸುವ ಬದ್ಧತೆಯನ್ನು ಕ್ವಾಡ್ ಪಾಲುದಾರರು ಪುನರುಚ್ಚರಿಸಿದರು. ಭಯೋತ್ಪಾದಕರು, ಭಯೋತ್ಪಾದಕ ಸಂಘಟನೆಗಳು ಮತ್ತು ಅವರ ಪ್ರಾಕ್ಸಿಗಳ ಬಗ್ಗೆ ನಿರಂತರ ಮಾಹಿತಿ ಹಂಚಿಕೆಯ ಮೌಲ್ಯವನ್ನು ಅವರು ಒತ್ತಿಹೇಳಿದರು.

8. 2025 ಸೆಪ್ಟೆಂಬರ್‌ನಲ್ಲಿ, ಭಯೋತ್ಪಾದಕ ಉದ್ದೇಶಗಳಿಗಾಗಿ ಮಾನವರಹಿತ ವೈಮಾನಿಕ ವಾಹನಗಳ (UAV ಗಳು) ಬಳಕೆಯನ್ನು ಎದುರಿಸುವ ಮತ್ತು ಭಯೋತ್ಪಾದಕ ಹಣಕಾಸಿಗಾಗಿ ಹೊಸ ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ಭಯೋತ್ಪಾದಕ ಶೋಷಣೆಯನ್ನು ತಡೆಯುವ ಕುರಿತು ಭಾರತವು ಎರಡು ಕ್ವಾಡ್ CTWG ಕಾರ್ಯಾಗಾರಗಳನ್ನು ಆಯೋಜಿಸಿತು. ಈ ಕಾರ್ಯಾಗಾರಗಳನ್ನು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಮನ್ವಯದೊಂದಿಗೆ ಕ್ರಮವಾಗಿ ರಾಷ್ಟ್ರೀಯ ಭದ್ರತಾ ಗಾರ್ಡ್ ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆ ಆಯೋಜಿಸಿದ್ದವು.

9. ಕ್ವಾಡ್ ಪಾಲುದಾರರು ಕ್ವಾಡ್ ಚೌಕಟ್ಟಿನೊಳಗೆ ಭಯೋತ್ಪಾದನೆ ನಿಗ್ರಹ ಸಹಕಾರವನ್ನು ಮತ್ತಷ್ಟು ಆಳಗೊಳಿಸಲು ಮತ್ತು 2026 ರಲ್ಲಿ ಕ್ವಾಡ್ ಭಯೋತ್ಪಾದನೆ ನಿಗ್ರಹ ಕಾರ್ಯಕಾರಿ ಗುಂಪಿನ ಮುಂದಿನ ಸಭೆಯನ್ನು ಆಯೋಜಿಸಲು ಬದ್ಧರಾಗಿದ್ದಾರೆ.

ನವದೆಹಲಿ

ಡಿಸೆಂಬರ್ 06, 2025